



ಗೈಡ್ ಜೊತೆ ಚಾರಣಿಗರ ತಂಡ

ಹಿಮಾವೃತ ಪರ್ವತ ಶ್ರೇಣಿಗಳ ಸೊಬಗು ವರ್ಣಿಸಲು ಅಸಾಧ್ಯ. ಹೊರಗಡೆಯ ನೋಟ ಅತ್ಯಂತ ಸುಂದರ. ಆದರೆ ಹೀಟರ್ ಬಿಟ್ಟು, ಮೈಕೊರೆವ ಚಳಿಗೆ ಮತ್ತೆ ಹೊರಗೆ ಹೋಗಲು ಧೈರ್ಯ ಸಾಲಲಿಲ್ಲ.

ಸ್ಥಳೀಯರು ಹೇಳುತ್ತಾರೆ– ಆಕಾಶ ಶುಭ್ರವಾಗಿದ್ದು, ಮೋಡದ ಮುಸುಕಿಲ್ಲವೆಂದರೆ ಚಳಿಯ ಪ್ರಕೋಪ ಇನ್ನೂ ಹೆಚ್ಚು. ಈ ಹುಣ್ಣಿಮೆಯ ರಾತ್ರಿ, ಆಕಾಶ ಶುಭ್ರವಾಗಿತ್ತು. ಹೊರಗಡೆ ಏನಿಲ್ಲವೆಂದರೂ ಮೈನಸ್ 25 ಡಿಗ್ರಿ ತಾಪಮಾನವಿರಬಹುದು. ನಾವು ಸುತ್ತಾಡಿ ಬರೋಣವೆಂದು ಹೊರಟೆವು. ಜಾಸ್ತಿ ದೂರ ಹೋಗಬೇಡಿ ಇದು ಹಿಮಚಿರತೆಗಳಿರುವ ಪ್ರದೇಶ ಎಂದು ದೋರ್ಜೆ, ನಮಜಲ್ ಮೊದಲೇ ಎಚ್ಚರಿಸಿದ್ದರು. ಮನೆಯಿಂದ ಹೊರಗಡೆ ಕಾಲಿಡುತ್ತಿದ್ದಂತೆ ಚಳಿ ಮೈಕೊರೆಯಲಾರಂಭಿಸಿತು. ಇಷ್ಟು ಚಳಿಯಲ್ಲಿ ಹೊರಗಿರಲು ಸಾಧ್ಯವೇ ಇಲ್ಲದಂತಾಗಿ ಕೋಣೆ ಸೇರಿಕೊಂಡೆವು.

ಮರುದಿನದ ದಾರಿ ಸಂಪೂರ್ಣ ಭಿನ್ನ. ಇಲ್ಲಿಂದ 5 ಕಿ.ಮೀ. ದೂರದಲ್ಲಿರುವ ರಿಡ್ಜಾಂಗ್ (**Ridzong**) ಎಂಬ ಹಳ್ಳಿಗೆ ಪ್ರಯಾಣ. ಮೊದಲೇ ನಿರ್ಧರಿಸಿದ್ದಂತೆ ಅಲ್ಲಿಂದ ಮುಂದೆ ಕಾರಿನಲ್ಲಿ ನಾವು ಪ್ರಯಾಣಿಸಬೇಕಿತ್ತು. ನಾಲ್ಕಾರು ಮನೆ, ಗದ್ದೆ ದಾಟಿ ಹೊರ ಬರುತ್ತಿದ್ದಂತೆ ದಾರಿ ಕಿರಿದಾಗಿ, ಗುಡ್ಡ ಇಳಿದು ಕಣಿವೆಯಲ್ಲಿ ಹೆಜ್ಜೆ ಹಾಕುತ್ತ ಮುಂದುವರೆದೆವು. ಸ್ವಲ್ಪದರಲ್ಲೆ ಹಿಮಕಟ್ಟಿದ, ಕೆಲವೆಡೆ ಹರಿಯುವ ನೀರಿನ ತೊರೆ ಸಿಕ್ಕಿತು. ಇಲ್ಲಿನ ದೃಶ್ಯಾವಳಿಗಳು ಚಿಕ್ಕಂದಿನಲ್ಲಿ ಕಥೆಗಳಲ್ಲಿ ಕೇಳುತ್ತಿದ್ದ ದೃಶ್ಯಾವಳಿಗಳಿಗೆ ಹೊಂದಾಣಿಕೆಯಾಗುತ್ತಿತ್ತು. ನಿಜಕ್ಕೂ ಸ್ವರ್ಗ ಸದೃಶ.

ಆ ಕಿರುನದಿ ಮುಂದೆ ದೊಡ್ಡದಾಯಿತು, ಎರಡು ಬದಿ ಬೃಹತ್ ಗುಡ್ಡಗಳು. ಅದರಿಂದ ಕಲ್ಲು ಬೀಳುವ ಭಯ. ಕಾಲು ದಾರಿ ಈಗ ನದಿಯೊಂದಿಗೆ ಜೊತೆಯಾಯಿತು. ಮುಂದಿನದ್ದು ಹೆಪ್ಪುಗಟ್ಟಿದ ನದಿಯ ಮೇಲಿನ ಚಾರಣ.

ಮಧ್ಯಾಹ್ನ ಒಂದು ಘಂಟೆಯ ಸುಮಾರಿಗೆ ನಾವು ರಿಡ್ಜಾಂಗ್ ತಲುಪಿದೆವು. ಇದೂ ಸಣ್ಣ ಹಳ್ಳಿ. ಇಲ್ಲಿಯ ಬೌದ್ಧರ ಸ್ತೂಪ ಪ್ರಸಿದ್ಧವಾದದ್ದು. ಇಲ್ಲಿ ನಮ್ಮ ಚಾರಣ ಕೊನೆಯಾಗಬೇಕಿತ್ತು. ಆದರೆ ದಾರಿಯಲ್ಲಿ 2 ಅಡಿಯಷ್ಟಿದ್ದ ಹಿಮ–ದಿಂದಾಗಿ ನಮ್ಮ ಕಾರು ಸೇರಿದಂತೆ ಬೇರೆ ಯಾವ ವಾಹನಗಳೂ ಇಲ್ಲಿರಲಿಲ್ಲ. ಫೋನ್ ಮಾಡಿ ವಿಚಾರಿಸೋಣವೆಂದರೆ ಸಿಗ್ನಲ್ ಇಲ್ಲ. ಕಾರು ಸಿಗುವವರೆಗೂ ಚಾರಣ ಮುಂದುವರೆಯಿತು. ಬೃಹತ್ ಹಿಮಾಚ್ಛಾದಿತ ಬೆಟ್ಟಗಳ ಸರಣಿ ದಾರಿಯುದ್ದಕ್ಕೂ. ವಿಜ್ಞಾನಿಗಳು ಊಹಿಸಿದಂತೆ ಇವೆಲ್ಲ ಶತಶತಮಾನಗಳ ಹಿಂದೆ ಸಮುದ್ರದಲ್ಲಿದ್ದ ಪ್ರದೇಶ. ಅದಕ್ಕೆ ಪುರಾವೆಯೋ ಎಂಬಂತೆ ಎಲ್ಲೆಡೆ ಗುಂಡಗಿನ ಕಲ್ಲುಗಳು. ಬೆಟ್ಟಗಳ ತುಂಬೆಲ್ಲಾ ಇಂತಹದ್ದೇ ಕಲ್ಲುಗಳ ರಾಶಿ. ಬಗೆ ಬಗೆಯ ಬಣ್ಣಗಳು.

ಸುಮಾರು 2 ಗಂಟೆಗೆ ನಾವು 'ಉಲೇಟೋಕ್ಪೊ (**Uley tokpo**) ಎಂಬ ಹಳ್ಳಿಗೆ ತಲುಪಿದೆವು. ಇದು ಮುಖ್ಯ ರಸ್ತೆ ಎನ್‌ಎಚ್–1 ಸೇರುವ ಜಾಗ. ಇಲ್ಲಿ ಡ್ರೈವರ್ ಕಾರಿನೊಂದಿಗೆ ನಮಗಾಗಿ ಕಾಯುತ್ತಿದ್ದ. ಅಲ್ಲಿಗೆ ನಮ್ಮ ಚಾರಣ ಕೊನೆಯಾಯಿತು. 4–5 ಕಿ.ಮೀ. ನಡಿಗೆ ಹೆಚ್ಚಾಗಿತ್ತು. ಆದರೆ ದಾರಿಯುದ್ದಕ್ಕೂ ಅನುಭವಿಸಿದ ಅನುಭವಗಳು ಮಾತ್ರ ಅದ್ಭುತ. ನಿಸರ್ಗದ ಮಡಿಲಲ್ಲಿ, ದಟ್ಟ ಹಿಮದಿಂದ ಆವೃತವಾದ ಹಿಮಾಲಯ ಪರ್ವತ ಶ್ರೇಣಿಗಳ ನಡುವೆಯ ಈ ಚಾರಣ ನಿಜಕ್ಕೂ ಮರೆಯಲಾಗದ್ದು. ●